ತಮ್ಮ ಬಂಗಲೆಗೆ ಹೆಚ್ಚು ಪರಿಹಾರ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಕೊಂಡು ಪರಿಹಾರವನ್ನು ತೆಗೆದುಕೊಂಡಿದ್ದಾರೆ. ಬಡ ರೈತರ ಮನೆ, ಜಮೀನು ಮುಳುಗಡೆಯಾಗಿದ್ದು ಬಹಳಷ್ಟು ಒತ್ತಾಯ ಮಾಡಿದರೂ ಪರಿಹಾರ ದೊರೆತಿಲ್ಲ. ಅನೇಕ ಜನ ಕೋರ್ಟ್ ಕಛೇರಿ ಕಾಣದೆ ಇದ್ದವರಿಗೆ ಪರಿಹಾರ ಬಂದಿಲ್ಲ. ಉದಾಹರಣೆಗೆ ಮೇಗರವಳ್ಳಿ, ಯಡಿಯೂರು, ತೀರ್ಥಹಳ್ಳಿಯಲ್ಲಿರುವ ಮನೆಗಳಿಗೆ ಪರಿಹಾರ ತೆಗೆದುಕೊಂಡಿದ್ದಾರೆ. ಮತ್ತೆ ಇನ್ನೂ ಅವರ ಜಮೀನು ಮುಳುಗಡೆಗೆ ಸೇರದೇ ಹೋದರೂ ಅವರೇ ಟ್ರೆಂಚನ್ನು ಸೃಷ್ಟಿ ಮಾಡಿ ಭೂ ಸ್ವಾಧೀನಾಧಿಕಾರಿಗಳ ಗಮನಕ್ಕೆ ಬರದಂತೆ ಡಿಫ್ಯುಟಿ ಸೆಕ್ರೆಟರಿಯವರು ರೆವಿನ್ಯೂ ಇಲಾಖೆಯಿಂದ ನೋಟಿಫಿಕೇಷನ್ ಜೊರಡಿಸಿದ್ದಾರೆ. ಅವರಿಗೆ ಏನು ಸಂಬಂಧ ಇದೆ ? ಅವರು ಯಾರು ಇದನ್ನು ಮಾಡುವುದಕ್ಕೆ ? ಅವರು ಸ್ಥಳ ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಸರ್ವೆ ನಂಬರ್ ೧೪೭ ಮುಳುಗಡೆ ಆಗುವುದಿಲ್ಲ. ಅದು ಯಡಿಯೂರು ಟೌನ್‌ನಲ್ಲಿದೆ. ಟೌನಿನಲ್ಲಿರುವಕ್ಕೆ ತೆಂಗಿನ ತೋಟ, ಮನೆಯನ್ನು ಮುಳುಗಡೆಗೆ ಸೇರಿಸಿ ದುಡ್ಡು ಲಪಟಾಯಿಸುವ ಕೆಲಸವನ್ನು ಅಲ್ಲಿನ ಅಧಿಕಾರಿಗಳು ಮತ್ತು ವಿಧಾನಸೌಧದಲ್ಲಿರುವ ಅಧಿಕಾರಿಗಳು ಮಾಡಿದ್ದಾರೆ. ಯಾವ ಕಾರಣಕ್ಕಾಗಿ ಅದನ್ನು ಸೇರಿಸಿದ್ದೀರಿ ಎಂದು ನಾನು ಪತ್ರ ಬರೆದಿದ್ದೇನೆ. ಇಪತ್ತಿನವರೆಗೂ ಅದಕ್ಕೆ ಉತ್ತರ ಬರೆದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಮುಳುಗಡೆ ಆಗುವ ಜಮೀನಿನ ಬಗ್ಗೆ ಇರುವ ಹೈ ಪವರ್ ಕಮಿಟಿಗೆ ಸನ್ಮಾನ್ಯ ಸದಸ್ಯರಾದ ಸ್ವಾಮಿರಾವ್ ಅವರೂ ಸದಸ್ಯರು. ಈ ಸಮಸ್ಯೆಯನ್ನು ಆ ಸಮಿತಿಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಆದರೆ ವಿವರಗಳನ್ನು ಇಲ್ಲಿ ಕಾಳಿತು ಚರ್ಚೆ ಮಾಡುವ ಬದಲು, ಯಡಿಯೂರಿನಲ್ಲಿ ಯಾವುದೋ ಸರ್ವೇ ನಂಬರ್ ಬಗ್ಗೆ ಏನಾಗಿದೆ ಎಂದು ಕೇಳುವ ಬದಲು ಆ ಸಭೆಯಲ್ಲೇ ಚರ್ಚೆ ಮಾಡೋಣ ಎಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ನಾವು ಸದಸ್ಯನೂ ಹೌದು, ಅವರು ಅಧ್ಯಕ್ಷರೂ ಹೌದು. ಹೈ ಪವರ್ ಕಮಿಟಿ ಸಭೆಯನ್ನು ಯಾವತ್ತೋ ಕರೆಯುತ್ತಾರೆ. ಆಗ ಪರಿಹಾರಕ್ಕಾಗಿ ಜನರು ಹಾತೊರೆಯುತ್ತಿರುತ್ತಾರೆ. ನಮ್ಮ ಜಮೀನು ಮುಳುಗಿ ಹೋಗುತ್ತದಲ್ಲ ಎಂಬ ಸಂಕಟದಲ್ಲಿರುತ್ತಾರೆ. ಅರ್ಧ ಗಂಟೆ ಕಾಲದ ಸಭೆ ಕರೆದಾಗ ಅಲ್ಲಿ ನಾವು ಏನೂ ಹೇಳುವುದಕ್ಕಾಗುವುದಿಲ್ಲ. ಯಾವಾಗ ಮೀಟಿಂಗ್ ಕರೆಯುತ್ತೀರಿ ಎಂದು ಆ ಕಮಿಟಿ ಅಧ್ಯಕ್ಷರನ್ನು ಕೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಆದಷ್ಟು ಬೇಗ ಕರೆಯುತ್ತೇನೆ.

ನೋಣಾಲ್ ಪ್ರೌಢಶಾಲೆಯಲ್ಲಿ ಶಿಕ್ಷಕರ ಕೊರತೆ

೯೨೩ (೨೫೧೭) ಶ್ರೀ ರಮಾನಾಥ ರೈ (ಬಂಟ್ವಾಳ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬಂಟವಾಳ ತಾಲ್ಲೂಕಿನ ವಾಮನ ಪದ ಕಿರಿಯ ಕಾಲೇಜು, ಮಣಿನಾಲೂರು ಪ್ರೌಢಶಾಲೆ, ನೋಣಾಲ್ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆಯೇ ? ಇದ್ದರೆ ಅವುಗಳ ಸಂಖ್ಯೆ ಎಷ್ಟು (ವಿವರ ನೀಡುವುದು)

ಆ) ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ವಾಮನಪದವು ಕಿರಿಯ ಕಾಲೇಜಿನಲ್ಲಿ ಇಂಗ್ಲೀಷ್ ಉಪನ್ಯಾಸಕರ ಹುದ್ದೆ ಖಾಲಿ ಇದೆ. ಕೆಳಗಿನ ಪ್ರೌಢಶಾಲಾ ವಿಭಾಗದಲ್ಲಿ ಖಾಲಿ ಹುದ್ದೆಗಳ ವಿವರ ಈ ರೀತಿ ಇದೆ.

ವಾಮನ ಪದವು	೫
ಮಣಿನಾಲೂರು	೫
ನೇಗಾಲ್	೨

ಆ) ಪ್ರಮುಖ ಪದವಿ ಕಾಲೇಜಿನ ಖಾಲಿ ಹುದ್ದೆಗೆ ರಾಜ್ಯ ಮಟ್ಟದ ನೇಮಕಾತಿ ಸಮಿತಿಯಿಂದ ಆಯ್ಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಪ್ರೌಢಶಾಲಾ ವಿಭಾಗದಲ್ಲಿ ಖಾಲಿ ಇರುವ ಸಹಾಯಕ ಶಿಕ್ಷಕರ ಹುದ್ದೆ ಮತ್ತು ದೈಹಿಕ ಶಿಕ್ಷಕ-ಶ್ರೇಣಿ-೧ ಹುದ್ದೆಗಳಿಗೆ ವಿಭಾಗ ಮಟ್ಟದ ನೇಮಕಾತಿ ಸಮಿತಿ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬಿ. ಎಂ. ಇದಿನಬ್ಬ.- ೯೨೩ (೨೫೧೭) (ಶ್ರೀ ರಾಮಪ್ಪ ರೈ ಅವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ವಾಮನ ಪದವಿನಲ್ಲಿ ೫, ಮಣಿಲೂರಿನಲ್ಲಿ ೫, ಮತ್ತು ನೋಣಾಲ್‌ನಲ್ಲಿ ೨ ಹೀಗೆ ೧೨ ಸ್ಥಾನಗಳು ಖಾಲಿ ಉಂಟು ಎಂದು ಹೇಳಿದ್ದಾರೆ. ನೇಮಕಾತಿ ಸಮಿತಿಯಿಂದ ಈ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದಷ್ಟು ಜಾಗ್ರತೆ ಈ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂಬುದನ್ನು ಹೇಳಬೇಕು.

ಶ್ರೀ ಬಿ. ಸೋಮಶೇಖರ್.—ಆದಷ್ಟು ಬೇಗ ಮಾಡುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಸಾಧಾರಣ ಎಷ್ಟು ಸಮಯ ಆಗುತ್ತದೆ ?

ಶ್ರೀ ಬಿ. ಸೋಮಶೇಖರ್.—ಆದಷ್ಟು ಬೇಗ.

ಮುಧೋಳ್ ತಾಲೂಕಿನಲ್ಲಿ ಮಿರಚಿ ಮಲ್ಲಾಪುರ ಸೇತುವೆ

೯೨೫ (೨೫೧೩) ಶ್ರೀ ಬಿ. ಜಿ. ಜಮಖಂಡಿ (ಮುಧೋಳ್).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಮುಧೋಳ್ ತಾಲೂಕು ಮಿರಚಿ-ಮಲ್ಲಾಪುರ ಸೇತುವೆ ಯಾವಾಗ ಮಂಜೂರಾಯಿತು,

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚವೆಷ್ಟು, ?

ಇ) ಸದರಿ ಸೇತುವೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು) ಅ ಮತ್ತು ಆ ಸರ್ಕಾರಿ ಆದೇಶ ಸಂ.ಪಿಡಬ್ಲ್ಯೂಡಿ ೨೯೪ ಸಿಬಿಆರ್‌೮೬, ಬೆಂಗಳೂರು ದಿನಾಂಕ ೨೯-೧೨-೧೯೮೬ ರಂದು ಸದರೀ ಕೆಲಸಕ್ಕೆ ಸರ್ಕಾರದಿಂದ ರೂ.೮.೦೦ ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರೆತಿದೆ. ತಾಂತ್ರಿಕ ಮಂಜೂರಾತಿಯನ್ನು ರೂ.೮.೭೦ ಲಕ್ಷಗಳಿಗೆ ಮುಖ್ಯ ಇಂಜಿನಿಯರ್ ರವರು ೧೭-೩-೮೭ರಲ್ಲಿ ನೀಡಿದ್ದಾರೆ.

ಇ) ಸದರೀ ಕೆಲಸಕ್ಕೆ ಟೆಂಡರುಗಳನ್ನು ಕರೆಯಲಾಗಿದ್ದು ಶೀಘ್ರದಲ್ಲೇ ಕೆಲಸ ಪ್ರಾರಂಭಿಸಲಾಗುವುದು ೯೨೪ (೧೯೨೧) ಸದಸ್ಯರು ಹಾಜರಿರಲಿಲ್ಲ.

ಶ್ರೀ ಬಿ. ಜಿ. ಜಮಖಂಡಿ.—ಮಾನ್ಯ ಅಧ್ಯಕ್ಷರೆ, ಈ ಮಲ್ಲಾಪುರ ಎಂಬ ಹಳ್ಳಿ ನನ್ನ ತಾಲ್ಲೂಕಿನ ಕಟ್ಟ ಕಡೆಯ ಹಳ್ಳಿ. ಅದಕ್ಕೆ ಸಂಪರ್ಕ ಆಗಬೇಕಾದರೆ ಈ ನಾಲೆಗೆ ಸೇತುವೆ ಕಟ್ಟುವುದು ಅಪಶ್ಯ. ಕಳೆದ ವರ್ಷ ಲೋಕೋಪಯೋಗಿ ಮಂತ್ರಿಗಳು ಬಂದಾಗ ನಿವೇದನೆ ಮಾಡಿದಾಗ ಅವರು ಅಡಿಗಲ್ಲು ಹಾಕಿದರು ಈ ಹಳ್ಳಿಯಿಂದ ಮುಂಡಲ ಪಂಚಾಯಿತಿ ಇರುವ ಸ್ಥಳಕ್ಕೆ ಮತ್ತು ತಾಲ್ಲೂಕಿನ ಸ್ಥಳವಾದ ಮುಧೋಳಕ್ಕೆ ವ್ಯಾಪಾರ ಕೇಂದ್ರಕ್ಕೆ ಮಾಲೀಕರು ಬರಬೇಕಾದರೆ ಈ ಹಳ್ಳವನ್ನು ದಾಟಬೇಕು. ನನ್ನ ತಾಲ್ಲೂಕಿನ ಯಾವುದೇ ಹಳ್ಳಿಗಳಿಗೆ ಸಂಪರ್ಕ ಇಲ್ಲ. ಈಗಾಗಲೇ ಟೆಂಡರ್ ಕರೆದರೂ ಟೆಂಡರ್ ಹಾಕಲು ಜನ ಮುಂದೆ ಬರುತ್ತಿಲ್ಲ. ಟೆಂಡರ್ ಹಾಕದೇ ಇರುವ ಈ ಪರಿಸ್ಥಿತಿಯಲ್ಲಿ ಸರ್ಕಾರ ಇಲಾಖೆಯು ಮುಖಾಂತರವಾದರೂ ಸೇತುವೆ ಕಟ್ಟಿಸಿದರೆ ಅನುಕೂಲವಾಗುತ್ತದೆ. ಒಂದು ವೇಳೆ ನಿಯಮಾವಳಿಗೆ ವಿರೋಧವಾದರೂ ಸೇತುವೆ ಅವಶ್ಯ ಇರುವುದರಿಂದ ಗ್ರಾಮಾಂತರ ರೈತರಿಗೆ, ವ್ಯಾಪಾರಗಾರರಿಗೆ ಮತ್ತು ವಿದ್ಯಾರ್ಥಿಗಳಿಗೆ ಕಷ್ಟವಾಗಿರುವುದರಿಂದ ಸೇತುವೆ ಮಾಡುವ ಸಲುವಾಗಿ ಡಿಪಾರ್ಟ್‌ಮೆಂಟಿನಿಂದ ಮಂಜೂರು ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್ —ಮಾನ್ಯ ಅಧ್ಯಕ್ಷರೆ, ಈ ಕೆಲಸಗಳನ್ನು ಜಿಲ್ಲಾಪರಿಷತ್ತುಗಳಿಗೆ ವರ್ಗಾವಣೆ ಮಾಡಿದ್ದೇವೆ. ಅದರ ಬಗ್ಗೆ ಅವರು ಎಲ್ಲಾ ಕ್ರಮಗಳನ್ನು ತೆಗೆದುಕೊಂಡು ಟೆಂಡರ್‌ಗಳನ್ನು